(2)

ಕರ್ನಾಟಕ ಸರಕಾರ
ಆಯುಕ್ತರು, ಭೂಸ್ವಾಧೀನ, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಕೃಷ್ಣಾ ಮೇಲ್ದಂಡೆ ಯೋಜನೆ, ನವನಗರ
ಬಾಗಲಕೋಟೆರವರ ಕಾರ್ಯಾಲಯ - 587103

ದೂರವಾಣಿ : 08354-235925 Email : gmlaqukp@gmail.com

ಸಂ:ಕಂಇ/ಭೂಸ್ವಾ-3/ಸಿಆರ್-53/2017-18 1033 ದಿನಾಂಕ: 13-01-2021.

ಇವರಿಗೆ,

ವಿಶೇಷ ಭೂಸ್ವಾಧೀನಾಧಿಕಾರಿ,
ಕೃ.ಮೇ.ಯೋ., ದೇವದುರ್ಗ
ಕ್ಯಾಂಪ್: ಚಿಕ್ಕಹೊನ್ನಕುಣಿ.

ಮಾನ್ಯರೇ,

ವಿಷಯ:- ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರ ಹಕ್ಕು ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಅಧಿನಿಯಮ 2013ರ ಕಲಂ 25ರಡಿ ಅವಧಿ ವಿಸ್ತರಿಸುವ ಕುರಿತು.

ಉಲ್ಲೇಖ:- ತಮ್ಮ ಕಛೇರಿ ಪತ್ರ ಸಂ.ಎಲ್.ಎ.ಕ್ಯೂ/ಎಸ್.ಆರ್-36/2016-17, ದಿನಾಂಕ:09-12-2020 (ಈ ಕಛೇರಿ ಸ್ವೀಕೃತಿ ದಿನಾಂಕ: 10-12-2020).

-000-

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖರನ್ವಯ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರ ಹಕ್ಕು ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಅಧಿನಿಯಮ 2013ರ ಕಲಂ 19ರಡಿ ಅಂತಿಮ ಅಧಿಸೂಚನೆಯನ್ನು ದಿನಾಂಕ: 10-10-2019 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿರುತ್ತದೆ. ಅಧಿನಿಯಮದ ಪ್ರಕಾರ ಅಂತಿಮ ಅಧಿಸೂಚನೆ ದಿನಾಂಕದ 1 ವರ್ಷದೊಳಗಾಗಿ ಐತೀರ್ಪು ರಚಿಸಬೇಕಾಗುತ್ತದೆ. ಆದರೆ ಕೆಲವು ದಾಖಲೆಗಳನ್ನು ಪಡೆಯುವಗೋಸ್ಕರ ವಿಳಂಬವಾಗಿರುವುದು, ಆದ್ದರಿಂದ ಹೊಸ ಭೂಸ್ವಾಧೀನ ಕಾಯ್ದೆ ಪ್ರಕಾರ 1 ವರ್ಷದ ಅವಧಿಯನ್ನು ವಿಸ್ತರಿಸಲು ಅವಕಾಶವಿದ್ದು, ಆದರೆ ಭೂ ಕೋರಿಕಾ ಸಂಸ್ಥೆಯಿಂದ ಭೂಸ್ವಾಧೀನ ಮತ್ತು ಪುನರವಸತಿ ಹಾಗೂ ಪುನರನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಠೇವಣಿ ಮಾಡದೇ ಇರುವುದರಿಂದ ಯೋಜನೆಯ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಕಲಂ 25ರಡಿ 06 ತಿಂಗಳವರೆಗೆ ಕಾಲಾವಧಿಯನ್ನು ವಿಸ್ತರಿಸಲು ಕೋರಿರುತ್ತೀರಿ.

ಮೇಲಿನ ಪ್ರಕರಣದಲ್ಲಿ ಮಾನವಿ ತಾಲೂಕಿನ **ಚಿಕ್ಕಹಣಗಿ, ಕವಿತಾಳ** ಗ್ರಾಮಗಳ ಎಲ್‌ಎಕ್ಯೂ/ಎಸ್‌ಆರ್-ಇಎ-36/2016-17ರ ಪ್ರಕರಣದಲ್ಲಿ ತಮ್ಮ ಕೋರಿಕೆಯನ್ನು ಪರಿಗಣಿಸಿ ಕಲಂ 25ರಡಿ ದಿನಾಂಕ: 31-03-2021 ರವರೆಗೆ ಕಾಲಾವಕಾಶ ವಿಸ್ತರಿಸಿ ಅನುಮತಿ ನೀಡಿದೆ. ಕಾಲಾವಕಾಶ ನೀಡಿರುವ ಬಗ್ಗೆ ಅಂತರ್ಜಾಲದಲ್ಲಿ ಅಪ್‌ಲೋಡ ಮಾಡಲು ಈ ಮೂಲಕ ತಿಳಿಸಿದೆ.

ತಮ್ಮ ವಿಶ್ವಾಸಿ,

ಕಛೇರಿ ಟಿಪ್ಪಣಿ ಆಯುಕ್ತರವರಿಂದ ಅನುಮೋದಿಸಲ್ಪಟ್ಟಿದೆ.

ಆಯುಕ್ತರು,
ಪುಪು/ಭೂಸ್ವಾಧೀನ, ಕೃ.ಮೇ.ಯೋ.,
ನವನಗರ, ಬಾಗಲಕೋಟೆ
ಇವರ ಪರವಾಗಿ.

ಪ್ರತಿಯನ್ನು:

1) ಸಿಸ್ಟಂ ಮ್ಯಾನೇಜರ, ಕಂಪ್ಯೂಟರ ವಿಭಾಗ, ಕೃಮೇಯೋ, ಬಾಗಲಕೋಟೆ ಇವರಿಗೆ ಮಾಹಿತಿಗಾಗಿ.
2) ಕಛೇರಿ ಕಡತಕ್ಕೆ.